ರಾಜ್ಯ ಹೆದ್ದಾರಿ–15ರ ಕಿ.ಮೀ. 0.00 ರಿಂದ 47.00 (ಕಿಮೀ 32.00 ರಿಂದ 47.00)ರವರೆಗಿನ ರೂ. 490.00 ಲಕ್ಷ ಮೊತ್ತದ ರಸ್ತೆ ಕಾಮಗಾರಿಯನ್ನು ಇ–ಟೆಂಡರ್ ಮೂಲಕ ವಹಿಸಿಕೊಂಡಿದ್ದು, ಸದರಿ ಕಾಮಗಾರಿಯು ಪೂರ್ಣಗೊಳ್ಳಲು ಆರು ತಿಂಗಳ ಕಾಲಾವಧಿಯಿದ್ದರೂ ಸಹ ನಿಗದಿತ ಅವಧಿಗಿಂತ ಮೊದಲೇ ಅಂದರೆ ಕೇವಲ ಒಂದು ತಿಂಗಳಲ್ಲಿ ಉತ್ತಮ ಗುಣಮಟ್ಟದ ಪರಿಕರಗಳೊಂದಿಗೆ ಮುಗಿಸಿರುವುದು ಇಲಾಖೆಗೇ ಹೆಮ್ಮೆಯ ವಿಷಯವಾಗಿದ್ದು ಸದರಿ ಗುತ್ತಿಗೆದಾರರು ಅಭಿನಂದನೆಗೆ ಪಾತ್ರರಾಗಿದ್ದಾರೆಂದು ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡ (ಉತ್ತರ ವಲಯ), ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯವರು ಅಭಿಪ್ರಾಯ ಪಟ್ಟಿದ್ದು ಅದನ್ನು ತಮಗೆ ತಿಳಿಸಲು ಹರ್ಷಿಸುತ್ತಾ, ಮುಂದೆಯೂ ಸಹ ಇದೇ ರೀತಿ ಇಲಾಖೆಯ ಕಾಮಗಾರಿಗಳನ್ನು ಅತ್ಯಂತ ನಿಷ್ಠೆ ಪ್ರಾಮಾಣಿಕತೆಯಿಂದ ನಿರ್ವಹಿಸುವಿರೆಂದು ಆಶಿಸುತ್ತಾ, ಈಗ ಕೈಗೊಂಡಿರುವ ಕಾಮಗಾರಿಯು ಅತ್ಯುತ್ತಮವಾದ ಸಾಧನೆಯೆಂದು ಹೇಳಬಯಸುತ್ತೇನೆ.

ಗೆ:

ಶ್ರೀ ಗುರುನಾಥ ಕೊಳ್ಳೂರ
ಪ್ರಥಮ ದರ್ಜೆ ಗುತ್ತಿಗೆದಾರರು
ಬೀದರ್

ರೈತರಿಗೆ ರಸಗೊಬ್ಬರ ಪೂರೈಕೆ

188 (561) ಶ್ರೀ ಹ್ಯಾರಿಸ್ ಎನ್ ಎ:(ಶಾಂತಿನಗರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೈತರಿಗೆ ರಸಗೊಬ್ಬರ ಪೂರೈಕೆಯನ್ನು ವ್ಯವಸ್ಥಿತವಾಗಿ ಮಾಡಲು ಹಮ್ಮಿಕೊಂಡಿರುವ ಕ್ರಮಗಳೇನು;

ಆ) ಸಕಾಲದಲ್ಲಿ ರಸಗೊಬ್ಬರ ಪೂರೈಕೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ರಸಗೊಬ್ಬರ ಖರೀದಿಗಾಗಿ ಸರ್ಕಾರ ಮೀಸಲ್ಪಟ್ಟ ಹಣದ ಮೊತ್ತ ಎಷ್ಟು;

ಈ) ರೈತರ ಆತಂಕವನ್ನು ನಿವಾರಿಸುವುದಕ್ಕಾಗಿ ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ವಿತರಣೆಗೆ ಸರ್ಕಾರ ಕೈಗೊಂಡ ತ್ವರಿತ ಕ್ರಮಗಳೇನು?

ಶ್ರೀ ಶಿವರಾಜ ಎಸ್ ತಂಗಡಗಿ(ಕೃಷಿ ಸಚಿವರು):

ಅ) ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಂದ ಪ್ರತಿ ಹಂಗಾಮಿಗೆ ಬೇಡಿಕೆಯನ್ನು ಪಡೆದು ಕ್ರೋಡೀಕರಿಸಿ ಕೇಂದ್ರ ಸರ್ಕಾರದಿಂದ ಅನುಮೋದಿತಗೊಂಡ ರಸಗೊಬ್ಬರ ಬೇಡಿಕೆಯನ್ನು ಜಿಲ್ಲೆಗಳಿಗೆ ಕಳುಹಿಸಲಾಗುತ್ತದೆ. ಅನುಮೋದಿತ ಬೇಡಿಕೆಯ ಆಧಾರದ ಮೇಲೆ ಕೇಂದ್ರ ಸರ್ಕಾರ ಪ್ರತಿ ಮಾಹೆಯಾನ ರಸಗೊಬ್ಬರಗಳ ಹಂಚಿಕೆಯನ್ನು ಮಾಡುತ್ತಿದೆ. ಈ ಹಂಚಿಕೆಯ ಆಧಾರದ ಮೇಲೆ ರಸಗೊಬ್ಬರ ತಯಾರಕರ ಮೂಲಕ ಸರಬರಾಜು ಯೋಜನೆಯನ್ನು ತಯಾರಿಸಿ ಜಿಲ್ಲೆಗಳಿಗೆ ನೀಡಿ ಇದರ ಪ್ರಕಾರ ಸರಬರಾಜು ಪಡೆದು, ರೈತರಿಗೆ ಸಮರ್ಪಕವಾಗಿ ವಿತರಿಸುವ ಬಗ್ಗೆ ಉಸ್ತುವಾರಿ ಮಾಡುವಂತೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸೂಚಿಸಲಾಗುತ್ತದೆ.

ಆ) ರಸಗೊಬ್ಬರಗಳನ್ನು ಸಕಾಲದಲ್ಲಿ ರೈತರಿಗೆ ಸಮರ್ಪಕವಾಗಿ ಸರಬರಾಜು ಮಾಡಲು, ಕೇಂದ್ರ ಸರ್ಕಾರವು ಪ್ರತಿ ಹಂಗಾಮಿಗೆ ವಲಯ ಸಮ್ಮೇಳವನ್ನು ನಡೆಸಿ ರಾಜ್ಯದ ಬೇಡಿಕೆಗಳನ್ನು ಚರ್ಚಿಸಿ ಅಂತಿಮಗೊಳಿಸಲಾಗುವುದು. ಸದರಿ ಬೇಡಿಕೆಗೆ ಅನುಗುಣವಾಗಿ ಮಾಹೆವಾರು, ರಸಗೊಬ್ಬರಗಳ ಗ್ರೇಡ್‌ವಾರು, ಜಿಲ್ಲಾವಾರು ಮತ್ತು ತಾಲ್ಲೂಕುವಾರು ಬೇಡಿಕೆಯನ್ನು ಮರು ಹಂಚಿಕೆ ಇಲಾಖಾವತಿಯಿಂದ ಮಾಡಲಾಗುವುದು ಹಾಗೂ ಜಿಲ್ಲೆಗಳಿಗೆ ಕಳುಹಿಸಲಾಗುವುದು. ಈ ಬೇಡಿಕೆ ಮತ್ತು ಮಾಹೆವಾರು ಕೇಂದ್ರ ಸರ್ಕಾರದ ಹಂಚಿಕೆ ಆಧಾರದ ಮೇಲೆ ರಸಗೊಬ್ಬರ ತಯಾರಕರು ಜಿಲ್ಲೆಗಳಿಗೆ ರಸಗೊಬ್ಬರಗಳನ್ನು ಸರಬರಾಜು ಮಾಡುತ್ತಾರೆ. ಇದರೊಂದಿಗೆ, ರಾಜ್ಯ ಸರ್ಕಾರವು ಕಾಪು ದಾಸ್ತಾನು ಯೋಜನೆಯನ್ನು ಜಾರಿಗೆ ತಂದಿದೆ. ಇದರನ್ವಯ ರಸಗೊಬ್ಬರಗಳನ್ನು ಕೆ.ಎಸ್.ಸಿ.ಎಂ.ಎಫ್., ಬೆಂಗಳೂರುರವರ ಮುಖಾಂತರ ವಿವಿಧ ರಸಗೊಬ್ಬರ ತಯಾಕರಿಂದ ರಸಗೊಬ್ಬರಗಳನ್ನು ಖರೀದಿ ಮಾಡಿ ವಿವಿಧ ಜಿಲ್ಲೆಗಳಲ್ಲಿ ಾಸ್ತಾನು ಮಾಡಲಾಗಿದೆ. ಹೆಚ್ಚಿನ ಬೇಡಿಕೆ ಕಂಡು ಬಂದಾಗ ಬಳಕೆ ಸದರಿ ಕಾಪು ಾನನ್ನು ಬಳಕೆ ಮಾಡಲಾಗುತ್ತಿದೆ.

ಇ) ಸರ್ಕಾರವು ಕಾಫಿ ದಾಸ್ತಾನು ಯೋಜನೆಯಡಿ ರಸಗೊಬ್ಬರಗಳನ್ನು ದಾಸ್ತಾನು ಮಾಡಲು ಕೆ.ಎಸ್.ಸಿ.ಎಂ.ಎಫ್., ಬೆಂಗಳೂರು ರವರಿಗೆ 400.00 ಕೋಟಿ ರೂ.ಗಳ ಬ್ಯಾಂಕ್ ಸಾಲವನ್ನು ನೀಡಲಾಗಿದೆ. ಅಲ್ಲದೆ, 2010–11ನೇ ಸಾಲಿನ ಆಯವ್ಯಯದಲ್ಲಿ ಸಾಲದ ಬಡ್ಡಿ ವೆಚ್ಚ ಭರಿಸಲು 15.00 ಕೋಟಿ ರೂ.ಗಳ ಅನುದಾನವನ್ನು ಒದಗಿಸಿರುತ್ತದೆ.

ಈ) ಬಿತ್ತನೆ ಬೀಜ:

ರಾಜ್ಯದ ರೈತರಿಗೆ ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜವನ್ನು ವಿತರಣೆ ಮಾಡಲು ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ.

1. ಬೀಜ ಬದಲಿಕೆ ಆಧಾರಂತೆ ರಾಜ್ಯಕ್ಕೆ ಬೇಕಿರುವ ವಿವಿಧ ಕೃಷಿ ಬೆಳೆಗಳ ಬಿತ್ತನೆ ಬೀಜಗಳನ್ನು ಇಲಾಖೆಯು ಲೆಕ್ಕ ಮಾಡಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಮತ್ತು ಬೀಜ ವಿತರಣಾ ಸಂಸ್ಥೆಗಳಿಗೆ, ರೈತರಿಗೆ ಸಕಾಲಕ್ಕೆ ಬಿತ್ತನೆ ಬೀಜ ಪೂರೈಸಲು ಕಳುಹಿಸಿ ಕೊಡಲಾಗುತ್ತದೆ.
2. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಬೀಜೋತ್ಪಾದಕರ ಮತ್ತು ಬೀಜ ವಿತರಕರ ಸಭೆಯನ್ನು ನಿಯಮಿತವಾಗಿ ನಡೆಸಲಾಗುತ್ತಿದ್ದು, ಬೀಜ ವಿತರಣೆ, ದಾಸ್ತಾನು ಇತ್ಯಾದಿ ವಿಷಯಗಳನ್ನು ದೀರ್ಘವಾಗಿ ಚರ್ಚಿಸಿ ಬಿತ್ತನೆ ಬೀಜದ ಸರಬರಾಜಿಗೆ ಸರ್ಕಾರಿ ಮತ್ತು ಖಾಸಗಿ ಬೀಜ ಸಂಸ್ಥೆಗಳ ಮುಖಾಂತರ ವ್ಯವಸ್ಥೆ ಮಾಡಲಾಗುತ್ತಿದೆ.
3. ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ರಾಜ್ಯದ ರೈತರಿಗೆ ರಿಯಾಯಿತಿ ದರದಲ್ಲಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳು ಹಾಗೂ ಗುರುತಿಸಿದ ಮಾರಾಟ ಕೇಂದ್ರಗಳ ಮುಖಾಂತರ ಸಕಾಲದಲ್ಲಿ ಬಿತ್ತನೆ ಬೀಜ ದೊರಕಿಸಲು ವ್ಯವಸ್ಥೆ ಮಾಡಲಾಗಿದೆ.

2010 ಮುಂಗಾರು ಹಂಗಾಮಿಗೆ 7,67,990 ಕ್ವಿಂಟಾಲ್ ಪ್ರಮಾಣದ ಪ್ರಮಾಣಿತ/ಗುಣಮಟ್ಟದ ಬಿತ್ತನೆ ಬೀಜದ ಬೇಡಿಕೆಯಿದ್ದು ಇದಕ್ಕನುಗುಣವಾಗಿ 10,43,055 ಕ್ವಿಂಟಾಲ್ ಪ್ರಮಾಣದ ಬಿತ್ತನೆ ಬೀಜವನ್ನು ವಿತರಿಸಲು ವಿವಿಧ ಬೀಜ ವಿತರಣಾ ಸಂಸ್ಥೆಗಳು ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತವೆ. ಬಿತ್ತನೆ ಬೀಜದ ಲಭ್ಯತೆಯ ಸಮರ್ಪಕವಾಗಿರುತ್ತದೆ.

ರಸಗೊಬ್ಬರ:

ರೈತರ ಆತಂಕವನ್ನು ನಿವಾರಿಸುವುದಕ್ಕಾಗಿ ಸರ್ಕಾರವು ರಸಗೊಬ್ಬರಗಳನ್ನು ತ್ವರಿತವಾಗಿ ಕಾಪು ದಾಸ್ತಾನು ಯೋಜನೆ ತಯಾರಿಸಿ ರಸಗೊಬ್ಬರಗಳನ್ನು ದಾಸ್ತಾನು ಮಾಡಿರುವುದಲ್ಲದೆ, ರಾಜ್ಯದಲ್ಲಿ ರಸಗೊಬ್ಬರದ ಅಭಾವ ಕಂಡು ಬಂದಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಸಂಪರ್ಕ ಹೊಂದಿದ್ದು ಹೆಚ್ಚಿನ ರಸಗೊಬ್ಬರ ಸರಬರಾಜಿಗೆ ಕ್ರಮ ಕೈಗೊಳ್ಳುತ್ತದೆ. ಅಲ್ಲದೇ ರೈತರಿಗೆ ಬೇಕಾದ ಬಿತ್ತನೆ ಬೀಜಗಳನ್ನು ವಿವಿಧ ಯೋಜನೆಗಳಡಿ ರಿಯಾಯಿತಿ ದರದಲ್ಲಿ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಿಸಲಾಗುತ್ತಿದೆ.

ಸಹಕಾರಿ ವ್ಯಾಜ್ಯಗಳ ಇತ್ಯರ್ಥ

189(363) ಶ್ರೀ ಎನ್ ಎ ಹ್ಯಾರಿಸ್:(ಶಾಂತಿನಗರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರಿ ಸಂಸ್ಥೆಗಳಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುವ ವ್ಯಾಜ್ಯಗಳ ಸಂಖ್ಯೆ ಎಷ್ಟು?

ಆ) ವ್ಯಾಜ್ಯಗಳ ಶೀಘ್ರ ಇತ್ಯರ್ಥಕ್ಕಾಗಿ ಸರ್ಕಾರ ಯೋಜನೆ ರೂಪಿಸಿದೆಯೇ? (ವಿವರ ನೀಡುವುದು)

ಇ). ಹಾಗಿದ್ದಲ್ಲಿ ವ್ಯಾಜ್ಯಗಳ ತ್ವರಿತ ಇತ್ಯರ್ಥಕ್ಕಾಗಿ ನೂತನ ನ್ಯಾಯಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)

ಶ್ರೀ ಲಕ್ಷ್ಮಣ ಸ ಸವದಿ(ಸಹಕಾರ ಸಚಿವರು):

ಅ) ಬಾಕಿ ಇರುವ ಪ್ರಕರಣಗಳ ಸಂಖ್ಯೆ 16720.

ಆ) ಹೌದು.

ವ್ಯಾಜ್ಯಗಳ ಶೀಘ್ರ ಇತ್ಯರ್ಥಕ್ಕಾಗಿ ರಾಜ್ಯದಲ್ಲಿ 11 ಸಹಕಾರಿ ಹೊಸ ನ್ಯಾಯಾಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಕ್ರಮ ಸಂ	ಜಿಲ್ಲೆಗಳು	ಶಿಪಾರಸ್ಸು ಮಾಡಲಾದ ನ್ಯಾಯಾಲಯಗಳ ಸಂಖ್ಯೆ: